# ಪೋಲೆಂಡ್

## ಆಹಾರಪ್ರಿಯರಿಗೆ ಬಹುಪ್ರಿಯ



**ಯೂರೋಪ್‌ನ ಪೋಲೆಂಡ್ ಚಳಿಗೆ ಖ್ಯಾತಿಯಾದ ನಗರ. ಬೇಸಿಗೆಯ ಉತ್ತುಂಗದಲ್ಲೂ ಚಳಿರಾಯ ಮೈನೇವರಿಸುವ ಈ ದೇಶ, ಆಧುನಿಕತೆಗೆ ತೆರೆದುಕೊಂಡಿದ್ದರೂ ಸಾಂಪ್ರದಾಯಿಕ ಚಹರೆಗಳನ್ನು ಉಳಿಸಿಕೊಂಡಿದೆ.**

**■ ನರಸಿಂಹ ಸ್ವಾಮಿ ಎನ್.**

ಕಾಲಚಕ್ರ ಉರುಳಿದಂತೆ ಮನುಷ್ಯನ ಮನಸ್ಸಿನಲ್ಲಿ ಹೊಸ ಹೊಸ ಪ್ರಶ್ನೆಗಳು ಉದ್ಭವಿಸುತ್ತವೆ ಮತ್ತು ಅವನು ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಇರುತ್ತಾನೆ. ಹೀಗೆ ದೇಶಸಂಚಾರದ ಸುಖದೊಂದಿಗೆ ಜ್ಞಾನಸಂಪಾದನೆಯನ್ನೂ ಗಳಿಸುವ ಉದ್ದೇಶದ ನಮ್ಮ ಪೋಲೆಂಡ್ ಪ್ರವಾಸವು ವರುಣನ ಆಗಮನದಿಂದ ಮತ್ತಷ್ಟು ರೋಚಕವಾಗುವ ಮುನ್ಸೂಚನೆ ದೊರೆಯಿತು. ಮನಸಿನಲ್ಲಿ ಹೊಸದನ್ನು ಕಾಣುವ, ಹೊಸದನ್ನು ಕಲಿಯುವ ಉತ್ಸಾಹ ನೂರ್ಮಡಿಸಿತು.

ಪೋಲೆಂಡ್‌ಗೆ ಬೆಂಗಳೂರಿನಿಂದ ದುಬೈ ಮೂಲಕ ಅಥವಾ ದೋಹ ಮೂಲಕ ಪ್ರಯಾಣಿಸಬಹುದು. ನಾವು ದೋಹ ಮೂಲಕ ಕತಾರ್ ಏರ್‌ಲೈನ್ಸ್‌ನಲ್ಲಿ 'ವಾರ್ಸಾ'ಗೆ ಬಂದಿಳಿದೆವು. ವಾರ್ಸಾ ಪೋಲೆಂಡ್‌ನ ರಾಜಧಾನಿ.

ವಾರ್ಸಾ ವಿಮಾನ ನಿಲ್ದಾಣದಲ್ಲಿ ಹೊಟ್ಟೆ ಚುರುಗುಟ್ಟಿದಾಗ ಆಪದ್ಬಾಂಧವನಂತೆ ಕಣ್ಣಿಗೆ ಬಿದ್ದದ್ದು ಮ್ಯಾಕ್‌ಡೊನಾಲ್ಡ್. ಅಲ್ಲಿ ಹೊಟ್ಟೆ ತುಂಬಿಸಿಕೊಂಡು, 'ಚೆಷ್ಟೋಶೋವ'ಗೆ ಹೋಗುವುದೆಂದು ಹೊರಟು ಟಿಕೆಟ್ ಕೊಳ್ಳಲು ಪರದಾಡಿದೆವು. ಅಲ್ಲಿ ಎಲ್ಲಾ ಪೋಲಿಶ್ ಭಾಷಾಮಯ. ಇಂಗ್ಲಿಷ್ ಕಡಿಮೆ. ಪೋಲೆಂಡ್ ಕಡಿಮೆ ಪ್ರವಾಸೋದ್ಯಮ ಇರುವ ಯೂರೋಪಿಯನ್ ರಾಷ್ಟ್ರ. ಅಲ್ಲಿ ಟ್ರೈನ್‌ನಲ್ಲಿ ಪ್ರಯಾಣಿಸುವ ಸಮಯವನ್ನು ಆಧರಿಸಿ ಟಿಕೆಟ್ ಪಡೆಯಬಹುದು. ಇಪ್ಪತ್ತು ನಿಮಿಷದ ಟಿಕೆಟ್ ಕೊಂಡೆವು. ಪ್ಲಾಟ್‌ಫಾರ್ಮ್‌ನಲ್ಲಿ ನಮ್ಮ ಹಿಂದೆಯೇ ಬಂದ ಮತ್ತೊಬ್ಬ ಪ್ರವಾಸಿಗರು, ನಾವು ಹೋಗಬೇಕಾಗಿದ್ದ ಜಾಗ ಇಪ್ಪತ್ತೈದು ನಿಮಿಷದ ಪ್ರಯಾಣವಿದ್ದು, ಕೊಂಡ ಟಿಕೆಟ್ ಇಪ್ಪತ್ತು ನಿಮಿಷದ್ದು ಎಂದು ಹೇಳಿದರು. ಮೊದಲ ದಿನವೇ ಸಾಹಸ ಬೇಡವೆಂದು ಟ್ಯಾಕ್ಸಿಯ ಕಡೆಗೆ ಮುಖ ಮಾಡಿದೆವು.

ವಾರ್ಸಾದಿಂದ ಚೆಷ್ಟೋಶೋವಕ್ಕೆ ಸುಮಾರು ಇನ್ನೂರ ಇಪ್ಪತ್ತು ಕಿ.ಮೀ. ದೂರ. ಬಸ್ಸು, ಟ್ಯಾಕ್ಸಿ ಅಥವಾ ಟ್ರೈನ್ ಮೂಲಕ ಪ್ರಯಾಣಿಸಬಹುದು. ಹೆದ್ದಾರಿಯಲ್ಲಿ ಗಂಟೆಗೆ ನೂರೈವತ್ತು ಕಿ.ಮೀ.ಗೂ ಅಧಿಕ ವೇಗದಲ್ಲಿತ್ತು ನಮ್ಮ ಟ್ಯಾಕ್ಸಿ. ನುಣುಪಾದ ಹಾಗೂ ಅಗಲವಾದ ರಸ್ತೆಗಳು, ಲೈನ್‌ನಲ್ಲೇ ಚಲಿಸುವ ವಾಹನಗಳು, ಸುಂದರವಾದ ಪರಿಸರ ನಮ್ಮ ಎರಡು ಗಂಟೆಗಳ ಪ್ರಯಾಣವನ್ನು ಆಹ್ಲಾದಕರವಾಗಿಸಿದ್ದವು. ಸಂಜೆಯ ವೇಳೆಗೆ ಚೆಷ್ಟೋಶೋವ ತಲುಪಿದೆವು.

ಚೆಷ್ಟೋಶೋವ ದಕ್ಷಿಣ ಪೋಲೆಂಡ್‌ನ ಒಂದು ಸಣ್ಣ ನಗರ. ಸುಮಾರು ಮೂರು ಲಕ್ಷ ಜನಸಂಖ್ಯೆ ಅಲ್ಲಿದೆ. ರಸ್ತೆ, ರೈಲು ಸಂಪರ್ಕ ಚೆನ್ನಾಗಿರುವುದರಿಂದಲೋ ಏನೋ ವಾರ್ಸಾದಿಂದ ಚೆಷ್ಟೋಶೋವವರೆಗೂ ದಾರಿಯುದ್ದಕ್ಕೂ ಅಲ್ಲಲ್ಲಿ ಸಣ್ಣ ಪುಟ್ಟ ಕಾರ್ಖಾನೆಗಳು ಕಂಡವು. ಚೆಷ್ಟೋಶೋವದ ಪ್ರಮುಖ ಆಕರ್ಷಣೆ 'ಬ್ಲ್ಯಾಕ್ ಮಡೋನಾ' ಚರ್ಚ್. ಅದರ ಮುಂದಿದ್ದ ಹೋಟೆಲ್‌ನಲ್ಲೇ ನಮ್ಮ ವಾಸ.

ನಾವು ಪೋಲೆಂಡ್‌ಗೆ ಹೋಗಿದ್ದು ಕಡು ಬೇಸಿಗೆಯಲ್ಲಿ. ಬೇಸಿಗೆಯಲ್ಲಿ ಅಲ್ಲಿನ ತಾಪಮಾನ ಗರಿಷ್ಠ 12 ಡಿಗ್ರಿ ಆಸುಪಾಸಿನಲ್ಲಿರುತ್ತದೆ. ಬೇಸಿಗೆಯದೇ ಈ ಸ್ಥಿತಿಯಾದರೆ ಇನ್ನು ಚಳಿಗಾಲದ ಗತಿ? ಚಳಿಯ ತೀವ್ರತೆ ಕಲ್ಪಿಸಿಕೊಂಡು ನಿಂತಲ್ಲೇ ಸಣ್ಣಗೆ ನಡುಗಿದೆ. ಅಂದಹಾಗೆ, ಪೋಲೆಂಡ್ ಹಾಗೂ ಉಕ್ರೇನ್ ಗಡಿ ಹಂಚಿಕೊಂಡಿವೆ.

ಬೇಸಿಗೆಯಾದ್ದರಿಂದ ಬಹುತೇಕರಿಗೆ ತುಂಡುಡುಗೆಯೇ ಖುಷಿ. ಬಹುಶಃ, ದೇಹಕ್ಕೆ ಇಡೀ ವರ್ಷಕ್ಕೆ ಬೇಕಾದ ವಿಟಮಿನ್ 'ಡಿ'ಯನ್ನು, ಈ ಎರಡು ತಿಂಗಳಲ್ಲೇ ಪಡೆಯುವ ಅನಿವಾರ್ಯತೆ! ಮೊದಲಿಗೆ ಅಲ್ಲಿದ್ದ ಮಾಲ್ ನೋಡಲು ಹೊರಟೆವು. 'ಗಲೇರಿಯೋ ಜುರಾಜಸ್ಕ' ನಮ್ಮ ಬೆಂಗಳೂರಿನ ಮಾಲ್‌ಗಳಂತೆಯೇ ಎಲ್ಲಾ ಬ್ರಾಂಡೆಡ್ ಮಳಿಗೆಗಳ ರಂಗಸ್ಥಳ. ಪ್ರವೇಶದ್ವಾರದಲ್ಲೇ ಹಾಕಿದ್ದ ದೊಡ್ಡ ಗಡಿಯಾರದ ಸ್ಕೆಲಿಟನ್ ಬಹಳ ಇಷ್ಟವಾಯಿತು. ಮಾಲ್‌ನಲ್ಲಿ ಯುವಜನರ ತಾರುಣ್ಯದ ಪ್ರದರ್ಶನ ರಂಗುರಂಗಾಗಿ ಪ್ರದರ್ಶನಗೊಂಡಿತ್ತು.

ಮರುದಿನ ಬ್ಲ್ಯಾಕ್ ಮಡೋನಾ ಚರ್ಚ್ ನೋಡಲು ಹೊರಟೆವು. ಈ ಚರ್ಚ್ ನೋಡಲು ದೇಶವಿದೇಶಗಳಿಂದ ಭಕ್ತರು ಬರುತ್ತಾರಂತೆ. ದೊಡ್ಡದಾದ ಸುಂದರವಾದ ಚರ್ಚ್‌ನ ಸುತ್ತಲೂ ಹಸಿರು ಲ್ಯಾಂಡ್‌ಸ್ಕೇಪ್‌ಗಳು ಆಕರ್ಷಕವಾಗಿದ್ದವು. ಪಕ್ಕದಲ್ಲೇ ಇದ್ದ ದೊಡ್ಡ ಉದ್ಯಾನವನ, ಅಲ್ಲಿನ ಕಥೆ ಹೇಳುವ ಕೆತ್ತನೆಗಳು ಚರ್ಚ್‌ಗೆ ಪ್ರಭಾವಳಿಯಂತೆ ಕಾಣಿಸುತ್ತಿದ್ದವು. ಮಾತೆ ಮೇರಿಯ ಮುಖದಲ್ಲಾಗಿದ್ದ ಗೀಚು (scar) ಹಾಗೆಯೇ ಉಳಿದಿತ್ತು. ಅದರ ಇತಿಹಾಸವನ್ನು ಭಕ್ತರೊಬ್ಬರಿಂದ ತಿಳಿದು ಹೊರಟೆವು.

ಪೋಲೆಂಡ್‌ನಲ್ಲಿ ಇಂಡಿಯನ್ ರೆಸ್ಟೋರೆಂಟ್‌ಗಳನ್ನು ಕಷ್ಟಪಟ್ಟು ಹುಡುಕಬೇಕು. ಪ್ರವಾಸದುದ್ದಕ್ಕೂ ಭೇಟಿ ಕೊಟ್ಟ ಭಾರತೀಯ